# SCCH-04

**ಸಾಕ್ಷಿ ಯನ್ನು ದಿನಾಂಕಃ 27.09.2024 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು ಶ್ರೀ ಟಿ ಕೆ ಆರ್** 2 ನೇ ಎದುರುದಾರರ ಪರ ವಕೀಲರಿಂದಃ-

ನಾನು ಆಟೋದಲ್ಲಿ ಹೋಗುವಾಗ ಹಿಂದೆ ಕುಳಿತಿದ್ದೆ. ಸದರಿ ಆಟೋದಲ್ಲಿ ನಾವು 5-6 ಜನ ಹೋಗುತ್ತಿದ್ದೆವು. ಪೊಲೀಸರಿಗೆ ದೂರನ್ನು ಆಟೋದವರು ನೀಡಿರುತ್ತಾರೆ. ವಸಂತ ಕುಮಾರ್ ಎನ್ನು ವವರು ಆಟೋ ಡ್ರೈವರ್ ಆಗಿರುತ್ತಾರೆ. ದೂರಿನಲ್ಲಿ 8 ಜನ ಹೋಗುತ್ತಿದ್ದೆವು ಎಂದು ಇದೆ ಎಂದರೆ ಸರಿಯಲ್ಲ. ಡ್ರೈವರ್ ಅಕ್ಕಪಕ್ಕದಲ್ಲಿ ಪ್ರಯಾಣಿಕರು ಕುಳಿತಿದ್ದರು ಎಂದರೆ ಸರಿಯಲ್ಲ. ಆಟೋದಲ್ಲಿ ಆ ಕಡೆ ಇ ಕಡೆ ಒಬ್ಬರು ನಿಂತಿದ್ದರು. ಸದರಿ ರಸ್ತೆಯು ರಾಷ್ಟೀಯ ಹೆದ್ದಾರಿ ಎಂದರೆ ಸರಿ. ಆ ದಿನ ನಾನು ಒಂಟಿ ಕೊಪ್ಪಲಿನಿಂದ ಬಿರೂರಿನ ಕಡೆಗೆ ಹೋಗುತ್ತಿದ್ದೆ. ಒಂಟಿ ಕೊಪ್ಪಲಿನಿಂದ ಅಪಘಾತವಾದ ಸ್ಥಳಕ್ಕೆ 3 ಕಿ ಮಿ ಅಂತರವಿದೆ. ಅಂದಾಜು 2.30 ಗಂಟೆಗೆ ಹೊರಟೆವು. ಸದರಿ ಆಟೋ ಚಾಲಕನನ್ನು, ಆಟೋ ಮಾಲೀಕನನ್ನು ಮತ್ತು ವಿಮಾದಾರರನ್ನು ಪಕ್ಷಗಾರರನ್ನಾಗಿ ಮಾಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಹೋಗುತ್ತಿದ್ದ ಆಟೋ ಮುಂಭಾಗಕ್ಕೆ ಜಖಂ ಆಗಿದೆ ಎಂದರೆ ಸರಿಯಲ್ಲ. ಐ ಎಂ ವಿ ವರದಿ ಪ್ರಕಾರ ನಮ್ಮ ಆಟೋದ ಮುಂಭಾಗಕ್ಕೆ ಜಖಂಗಳು ಆಗಿದೆ ಎಂದರೆ ಸರಿಯಲ್ಲ. ಅಗತ್ಯಕ್ಕಿಂತ ಹೆಚ್ಚಿನ ಜನಗಳನ್ನು ನಾವು ಹೋಗುತ್ತಿದ್ದ ಆಟೋದಲ್ಲಿ ಕುಳಿತಿದ್ದ ಕಾರಣ ಗಾಡಿಯ ನಿಯಂತ್ರಣ ತಪ್ಪಿ ಆಟೋ ಚಾಲಕನ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆಟೋವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಪಡೆಯುವ ಉದ್ದೇಶದಿಂದ ಪೊಲೀಸರೊಡನೆ ಶಾಮಿಲಾಗಿ 2 ದಿನ ತಡವಾಗಿ ಕಾರಿನ ಚಾಲಕನ ವಿರುದ್ದ ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಟೋಕ್ಕೆ ಯಾವುದೇ ದಾಖಲೆ ಮತ್ತು ವಿಮೆ ಇಲ್ಲದ ಕಾರಣ ಕಾರಿನ ವಿರುದ್ದ ಈ ಸುಳ್ಳು ಪ್ರಕರಣವನ್ನು ದಾಖಲಿಪಿಸಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ಪಂಚನಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಮೊದಲು ದಾಖಲಾದೆನು ಅಲ್ಲಿಂದ ಕಡೂರಿಗೆ ನಂತರ ಹಾಸನಕ್ಕೆ ಅಲ್ಲಿಂದ ಬೆಂಗಳೂರಿಗೆ ಬಂದು ಚಿಕಿತ್ಸೆಯನ್ನು ಪಡೆದಿರುತ್ತೇನೆ. ಪಂಚನಹಳ್ಳಿಯಲ್ಲಿ ಯಾವುದೇ ಚಿಕಿತ್ಸೆಯನ್ನು ನೀಡದೇ ಕಡೂರಿಗೆ ತೆಗೆದುಕೊಂಡು ಹೋಗಲು ಹೇಳಿದರು. ಕಡೂರಿನಲ್ಲಿ 1 ದಿನ ಚಿಕಿತ್ಸೆಯನ್ನು ಪಡೆದು ನಂತರ ಹಾಸನದಲ್ಲಿ 1 ವಾರ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಬೆಂಗಳೂರಿನಲ್ಲಿ 3 ತಿಂಗಳುಗಳ ಕಾಲ ಚಿಕಿತ್ಸೆಯನ್ನು ಪಡೆದಿರುತ್ತೇನೆ. 4 ಆಸ್ಪತ್ರೆಗಳಲ್ಲಿ ಯಾವ ರೀತಿ ಅಪಘಾತವಾಯಿತು ಎಂದು ಹೇಳಿರುವುದಿಲ್ಲ. ಸಾಕ್ಷಿ ಮುಂದುವರೆದು ಅಪಘಾತವಾದ ನಂತರ ನನಗೆ ಪ್ರಜ್ಞೆ ತಪ್ಪಿ ತ್ತು ಎಂದು ಉತ್ತರಿಸುತ್ತಾರೆ. ಅಪಘಾತವಾದ ನಂತರ 1 ವಾರದ ನನಗೆ ಪ್ರಜ್ಞೆ ಬಂದಿರುತ್ತದೆ. ತದನಂತರ ವೈದ್ಯರಿಗೆ ತಿಳಿಸಿರುತ್ತೇನೆ. ಹಾಸನದಲ್ಲಿ ಚಿಕಿತ್ಸೆಯನ್ನು ನೀಡಿದ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ವೈದ್ಯರನ್ನು ನ್ಯಾಯಾಲಯದ ಮುಂದೆ ವಿಚಾರಣೆ ಪಡಿಸಲು ನನಗೆ ತೊಂದರೆ ಇರುವುದಿಲ್ಲ. 4 ಆಸ್ಪತ್ರೆಯಲ್ಲಿ ನಾನು ಅಪಘಾತದ ಬಗ್ಗೆ ಹೇಳಿದ ವಿಚಾರವನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಅಪಘಾತದಲ್ಲಿ ನನಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದರೆ ಸರಿಯಲ್ಲ, ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮುಂದುವರೆದ ಚಿಕಿತ್ಸೆಗಾಗಿ 2 ಲಕ್ಷ ಹಣವನ್ನು ವ್ಯಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬಿ ಪಿ ಎಲ್ ಕಾರ್ಡ್ ಹೊಂದಿರುತ್ತೇನೆ ಎಂದರೆ ಸರಿ. ಆದ್ದರಿಂದ ನನಗೆ ಉಚಿತವಾಗಿ ವೈದ್ಯಕೀಯ ಚಿಕಿತ್ಸೆಯನ್ನು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಕ್ರಮಸಂಖ್ಯೆ 13 ರಲ್ಲಿ ದೊಡ್ಡಮ್ಮ ಎನ್ನುವ ಮಹಿಳೆಯ ಹೆಸರು ಇದೆ ಎಂದರೆ ಸಾಕ್ಷಿಯು ನನ್ನ ಪತ್ನಿ ಎಂದು ಉತ್ತರಿಸುತ್ತಾರೆ. ನಾನು ಹೋಗುತ್ತಿದ್ದ ಆಟೋದಲ್ಲಿ ನನ್ನ ಪತ್ನಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನನ್ನ ಪತ್ನಿ ಎಂದು ಉತ್ತರಿಸುತ್ತಾರೆ.

ನಿಪಿ 17 ರ ಬಿಲ್ಲು ಸೋಡಿ ಬಿಟ್ಟರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ವೈದಕೀಯ ಬಿಲ್ಲುಗಳನ್ನು ಸೃಷ್ಟಿಸಿ ಹಾಜರುಪಡಿಸುತ್ತೆನೆ ಎಂದರೆ ಸರಿಯಲ್ಲ. ನನ್ನ ಮುಂದಿನ ಚಿಕಿತ್ಸೆಗಾಗಿ ರೂ.30

ಸಾವಿರ ವೆಚ್ಚ ಬೇಕಾಗುತ್ತದೆ ಎಂದು ಯಾವುದೇ ಬರವಣಿಗೆ ಹಾಕಿರುವುದಿಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದ 4ನೇ ಕಂಡಿಕೆಯಲ್ಲಿ ತಿಳಿಸಿರುವಂತೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೆಲಸವನ್ನು ಮಾಡಿದ್ದಕ್ಕೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ಅದೇರೀತಿಯಾಗಿ ನನ್ನ ಮಾಸಿಕ ರೂ.25 ಸಾವಿರ ಸಂಪಾದನೆ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಸದರಿ ವಿಚಾರವಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಆರ್ಥಿಕ ನಷ್ಟ ಆಗಿರುವುದಿಲ್ಲ ಮತ್ತು ನಾನು ಮೊದಲಿನಂತೆ ಆರೋಗ್ಯದಿಂದ ಇದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ವಾಹನದಿಂದ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ವಯಸ್ಸು 60 ವರ್ಷ ಎಂದರೆ ಸರಿಯಲ್ಲ, ನನಗೆ 58 ವರ್ಷ ವಯಸ್ಸು ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಪರಿಹಾರದ ಹಣವನ್ನು ಪಡೆಯಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1ನೇ ಎದುರುದಾರರ ಪರ ವಕೀಲರು ಗೈರುಹಾಜರಾಗಿದ ಕಾರಣ ವಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**<u>ಮರು ವಿಚಾರಣೆ:</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**18ನೇ ಹೆಚ್ಚುವರಿ ನ್ಯಾಯಾಧೀಶರು**
**ಲಘು ವ್ಯವಹಾರಗಳ ನ್ಯಾಯಾಲಯ**
**ಬೆಂಗಳೂರು.**